ವಿವಿಧ ಬೆಳೆಗಳಲ್ಲಿ ಬಳಸಬಹುದಾದ ಕಳೆ ನಾಶಕಗಳ ಪಟ್ಟಿ:

ಕ್ರ. ಸಂ.	ಬೆಳೆ ಹೆಸರು	ಕಳೆನಾಶಕದ ಹೆಸರು	ಕಳೆನಾಶಕದ ಪ್ರಮಾಣ(ಹೆಕ್ಟೇರಿಗೆ)	ನಿಯಂತ್ರಣವಾಗುವ ಕಳೆಗಳು
	1	2	3	5
1.	ನಾಟಿ ಭತ್ತ	ಬ್ಯೂಟಾಕ್ಲೋರ್ ಶೇ.5ಹರಳು ಅಥವಾ ಅನಿಲೋಫಾಸ್ ಅಥವಾ ಥಯೋಬೆನಕಾರ್ಬ 50 ಇಸಿ.(ಬೆಂಥಿಯೋಕಾರ್ಬ) ಅಥವಾ ಪೆಂಡಿಮೆಥಾಲಿನ್ 30 ಇಸಿ. ಅಥವಾ ಆಕ್ಸಿಡಯಾಜೋನ್ 25 ಇಸಿ. ಅಥವಾ ಪೈರಜೋಸಲ್ಫುರಾನ್ ಈಥೈಲ್ 10 ಡಬ್ಲೂ. ಪಿ. ಅಥವಾ 2.4–ಡಿ ಇಥೈಲ್ಈಸ್ಟರ್ ಶೇ.5	12 ಕಿ.ಗ್ರಾಂ. 0.6 ಲೀ. 1.6 ಲೀ. ಹರಳು 1.3 ಲೀ. 0.4 ಲೀ. 80 ಗ್ರಾಂ. 6 ಕಿ.ಗ್ರಾಂ.	ವಾರ್ಷಿಕ ಹುಲ್ಲುಗಳು ಎಲ್ಲಾ ಕಳೆಗಳು –ಸದರಿ– ಎಲ್ಲಾ ಕಳೆಗಳು ದ್ವಿದಳ ಗುಂಪಿಗೆ ಸೇರಿದ ಕಳೆಗಳು
	ಕೂರಿಗೆ ಭತ್ತ	ಬ್ಯೂಟಾಕ್ಲೋರ್ 50 ಇಸಿ. ಅಥವಾ ಪೆಂಡಿಮೆಥಾಲಿನ್ 30 ಇಸಿ.	1.2 ಲೀ. 1.3 ಲೀ.	ಏಕದಳ ಹಾಗೂ ದ್ವಿದಳ ಕಳೆಗಳು
2.	ಜೋಳ/ ಗೋವಿನ ಜೋಳ/ಶಲ್ತಿ ಮಾನ್/ ಸಜ್ಜೆ	ಅಟ್ರಾಜಿನ ಶೇ.50	1.0 ಕಿ. ಗ್ರಾಂ.	ದ್ವಿದಳ ಗುಂಪಿಗೆ ಸೇರಿದ ಕಳೆಗಳು ಮತ್ತು ವಾರ್ಷಿಕ ಹುಲ್ಲುಗಳು
3	ಗೋಧಿ	ಪೆಂಡಿಮೆಥಾಲಿನ್ 30 ಇ.ಸಿ	1.3 ಲೀ.	–ಸದರಿ–
4.	ತೊಗರಿ/ಶೇಂಗಾ/ ಸೂರ್ಯಕಾಂತಿ/ ಹತ್ತಿ	ಪೆಂಡಿಮೆಥಾಲಿನ್ 30 ಇ.ಸಿ.ಅಥವಾ ಅಲಾಕ್ಲೋರ್ 50 ಇ.ಸಿ.	1.3 ಲೀ. 2.2 ಲೀ.	–ಸದರಿ–
5.	ಉದ್ದು	ಪುಕ್ಲೋರಾಲಿನ್ 45 ಇಸಿ. ಅಥವಾ ಅಲಾಕ್ಲೋರಾ 50.ಇಸಿ	0.8 ಲೀ. 1.2 ಲೀ.	–ಸದರಿ–
6.	ಸೋಯಾಅವರೆ	ಅಲಾಕ್ಲೋರಾ 50.ಇಸಿ. ಅಥವಾ ಕ್ಲೋಮ್ಯಾಜೋನ್ ಅಥವಾ ಕ್ವೋರಿಮ್ಯುರನ್ 25.ಇಸಿ.	1.6 ಲೀ. 0.8 ಲೀ. 15 ಗ್ರಾಂ.	ದ್ವಿದಳ ಗುಂಪಿಗೆ ಸೇರಿದ ಕಳೆಗಳುಮತ್ತು ವಾರ್ಷಿಕಹುಲ್ಲುಗಳು
7.	ಶೇಂಗಾ + ಮೆಣಸಿನಗಿಡ (4+2 ಸಾಲು)	ಅಲಾಕ್ಲೋರ್ 50.ಇಸಿ.	3.5 ಲೀ.	–ಸದರಿ–
8.	ಉಳ್ಳಾಗಡ್ಡಿ ಬಿತ್ತನೆಗೆ	ಪಡಂಡಿಮಿಥಲಿನ್ 50 ಇಸಿ.	1.3 ಲೀ.	–ಸದರಿ–
	ನಾಟಿ ಉಳ್ಳಾಗಡ್ಡಿ	ಆಕ್ಸಿಫ್ಲೋರೊಫೆನ್ 23.5 ಇಸಿ.	440 ಮಿ.ಲೀ	–ಸದರಿ–
9.	ಕೋತಂಬರಿ	ಮೆಟಲಾಕ್ಲೋರ್ 50 ಇ.ಸಿ.	400 ಕಿ.ಗ್ರಾಂ.	–ಸದರಿ–
10.	ಗೋವಿನ ಜೋಳ+ಸೋಯಾಅವರೆ	ಬ್ಯೂಟಾಕ್ಲೋರ್ 50 ಇ.ಸಿ.	1.2 ಲೀ.	–ಸದರಿ–
	/ ಅಲಸಂದಿ			
11.	ಜೋಳ +ತೊಗರಿ/	50ಬ್ಯೂಟಾಕ್ಲೋರ್ ಇಸಿ./ಪ್ರೆಟಿಲಾಕ್ಲೋರ್ 50ಇ.ಸಿ	1.2 ಲೀ.	–ಸದರಿ–
12.	ಭತ್ತ	ಪ್ರೋಪ್ಯಾನಿಲ್ 35 ಇಸಿ. ಅಥವಾ ಬಿಸ್‌ಪೈರಿಬ್ಯಾಕ್ ಸೋಡಿಯಂ 10% ಎಸ್.ಸಿ.	3.0 ಲೀ. 100 ಮಿ. ಲೀ.	ದ್ವಿದಳ ಮತ್ತು ಏಕದಳ ಜಾತಿಯ ಕಳೆಗಳು ವಾರ್ಷಿಕ ಹುಲ್ಲು ಮತ್ತು ದ್ವಿದಳ ಕಳೆಗಳು
13.	ಕೂರಿಗೆ ಭತ	ಪ್ರೋಪ್ಯಾನಿಲ್ 35 ಇಸಿ.	3.0 ಲೀ.	ವಾರ್ಷಿಕ ಹುಲ್ಲು ಮತ್ತು ದ್ವಿದಳ ಕಳೆಗಳು
14.	ಮೆಕ್ಕೆಜೋಳ	2,4–ಡಿ ಸೋಡಿಯಂ ಲವಣ	0.5 ಕಿ. ಗ್ರಾಂ.	ದ್ವಿದಳ ಕಳೆಗಳು
15.	ಗೋಧಿ	ಮೆಟ್‌ಸಲ್ಫುರಾನ್ ಮಿಥೈಲ್ 20 ಡಬ್ಲೂ. ಡಿ. ಜಿ.	8 ಗ್ರಾಂ.	ವಾರ್ಷಿಕ ಹುಲ್ಲು ಮತ್ತು ದ್ವಿದಳ ಕಳೆಗಳು
16.	ತೊಗರಿ / ಶೇಂಗಾ	ಇಮ್ಯಾಝಥಾಪೈರ್ 10 ಎಸ್.ಎಲ್	400 ಮಿ. ಲೀ.	ವಾರ್ಷಿಕ ಹುಲ್ಲು ಮತ್ತು ದ್ವಿದಳ ಕಳೆಗಳು
17.	ಉದ್ದು / ಶೇಂಗಾ	ಕ್ವಿಝಾಲೋಫಾಪ್ ಈಥೈಲ್ 5 ಇಸಿ ಪ್ರೋಪಾಕ್ವಿಝಾಫಾಪ್ 10 ಇಸಿ	400 ಮಿ. ಲೀ.	ವಾರ್ಷಿಕ ಹುಲ್ಲು
18.	ಸೂರ್ಯಕಾಂತಿ	ಪ್ರೋಪಾಕ್ವಿಝಾಫಾಪ್ 10 ಇಸಿ	250 ಮಿ. ಲೀ.	ವಾರ್ಷಿಕ ಹುಲ್ಲು

ಕಳೆನಾಶಕವನ್ನು ಉಪಯೋಗಿಸುವಾಗ ಈ ಕೆಳಗಿನ ನಿಯಮಗಳನ್ನು ತಪ್ಪದೇ ಪಾಲಿಸಬೇಕು.

- ವಿವಿಧ ಬೆಳೆಗಳಿಗೆ ವಿವಿಧ ಕಳೆನಾಶಕಗಳನ್ನು ಶಿಫಾರಿಸಲಾಗಿದೆ ಅದಕ್ಕಾಗಿಯೇ ರೈತರು ಯಾವ ಬೆಳೆಯನ್ನು ಬೆಳೆದಿರುತ್ತಾರೋ ಅದಕ್ಕೆ ಸೂಕ್ತವಾದ ಕಳೆನಾಶಕಗಳನ್ನಷ್ಟೆ ತಜ್ಞರ ಸಲಹೆಯ ಮೇರೆಗೆ ಸರಿಯಾದ ಪ್ರಮಾಣದಲ್ಲಿ ಬಳಸಬೇಕು.
- ಕಳೆನಾಶಕವನ್ನು ಸಿಂಪಡಿಸುವಾಗ ಮಣ್ಣಿನಲ್ಲಿ ತೇವಾಂಶ ಅವಶ್ಯವಾಗಿ ಇರಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಅಂಚೆ ಪೆಟ್ಟಿಗೆ ಸಂಖ್ಯೆ– 329

ರಾಯಚೂರು– 584101

e-Mail: kvkraichur@gmail.co.in
kvk.Raichur@icar.gov.in

Website: www.kvkraichur.com

ಅಕ್ಷರ ಜೋಡಣೆ ಮತ್ತು ವಿನ್ಯಾಸ:
ಶ್ರೀ ದೇವರಾಜ ನಾಯಕ
ಕುಮಾರಿ ಸುಮಂಗಳಮ್ಮ ಎಮ್. ಮತ್ತು ಕುಮಾರಿ ಶಿಲ್ಪಾ

UASR/PC/LL-Agron-15/2017-18

ಕೃಷಿ ವಿಶ್ವವಿದ್ಯಾಲಯ
ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ
ರಾಯಚೂರು

ಸಮಗ್ರ ಕಳೆ ನಿರ್ವಹಣೆ





ಲೇಖಕರು:
ಶ್ರೀಮತಿ. ಶ್ವೇತ ಬಿ.ಎನ್.
ಡಾ. ಎಂ. ವಿ. ರವಿ

ಸಂಪಾದಕರು:
ಡಾ. ರವಿ ಎಮ್.ವಿ.
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಕೆ.ವಿ.ಕೆ, ರಾಯಚೂರು

ಸಾಮಾನ್ಯ ಅರ್ಥದಲ್ಲಿ ಬೇಡದ ಜಾಗದಲ್ಲಿ ಬರುವಂತಹ ಗಿಡ, ಬಳ್ಳಿ, ಪೊದೆ ಮುಂತಾದವುಗಳನ್ನು ಕಳೆಯೆನ್ನಬಹುದು ಅಲ್ಲದೆ ಯಾವುದೆ ಒಂದು ಬೆಳೆಯಲ್ಲಿ ಕಂಡುಬರುವ ಅನಗತ್ಯ ಸಸ್ಯಗಳನ್ನು ಕಳೆ ಎನ್ನಲಾಗುವುದು. ಇವುಗಳು ಅನಪೇಕ್ಷಿತ ಹಾಗೂ ಬೇಕಿಲ್ಲದ ಸಸ್ಯಗಳಾಗಿರುತ್ತವೆ. ಒಂದು ಸಮೀಕ್ಷೆಯ ಪ್ರಕಾರ ಕೃಷಿ ಪೀಡೆಗಳಾದ ಕಳೆಗಳು, ಕೀಟಗಳು, ರೋಗಗಳು ಅಲ್ಲದೆ ಇಲಿಗಳು, ಪಕ್ಷಿಗಳು ದುಂಡಾಣುಗಳಿಂದಲೆ ಪ್ರಪಂಚದ ಒಟ್ಟು ಆಹಾರೋತ್ಪಾದನೆಯ ಮೂರನೆಯ ಒಂದು ಭಾಗದಷ್ಟು ನಷ್ಟ ಹೊಂದುತ್ತದೆ. ಅದರಲ್ಲಿ ಮುಖ್ಯವಾಗಿ ಕಳೆಗಳಿಂದಲೆ ಶೇಕಡಾ 45 ರಷ್ಟು ನಷ್ಟ ಉಂಟಾಗುತ್ತದೆ. ಯಾಕೆಂದರೆ ಇವುಗಳು ಮುಖ್ಯ ಬೆಳೆಗಳಿಗಿಂತಲೂ ಬೇಗ ವೃದ್ಧಿ ಹೊಂದಿ ಪೋಷಕಾಂಶಗಳಿಗಾಗಿ ತೇವಾಂಶಕ್ಕಾಗಿ, ಬಿಸಿಲು–ಬೆಳಕಿಗಾಗಿ ಸ್ಥಳಾವಕಾಶಕ್ಕಾಗಿ ಬೆಳೆಗಳೊಂದಿಗೆ ಸ್ಪರ್ಧಿಸಿ ಬೆಳೆಗಳಿಗಿಂತ ತೀವ್ರ ಗತಿಯಲ್ಲಿ ಅವುಗಳಿಗೆ ಲಭಿಸಬೇಕಾದ ಅಂಶಗಳನ್ನು ತಮ್ಮದಾಗಿಸಿಕೊಂಡು ಹೆಚ್ಚು ಸಧೃಢವಾಗಿ ಹಾಗೂ ಎತ್ತರಕ್ಕೆ ಬೆಳೆಯುತ್ತವೆ.

ಕಳೆಗಳಿಂದ ಸಂಭವಿಸುವ ಹಾನಿ ಮತ್ತು ನಷ್ಟಗಳು ಹಲವಾರು ಅವುಗಳಿಂದ ಬೆಳೆಗಳ ಇಳುವರಿ ಕುಸಿಯುವುದರ ಜೊತೆಗೆ ಉತ್ಪನ್ನಗಳ ಗುಣಮಟ್ಟಮೇಲೆ ಮತ್ತು ಮನುಷ್ಯನ ಹಾಗೂ ದನಕರುಗಳ ಆರೋಗ್ಯದ ಮೇಲು ಹಾನಿಯುಂಟುಮಾಡುತ್ತವೆ. ನೀರು ಗಾಲುವೆಗಳಲ್ಲಿ ನೀರು ಹರಿದು ಹೋಗಲು ಅಡ್ಡಿ ಮಾಡುತ್ತವೆ. ಜಮೀನಿನ ಮಾರಾಟ ಮಾಡುವಲ್ಲಿ ಬೆಲೆಯನ್ನು ಕಡಿಮೆಗೊಳಿಸುತ್ತವೆ. ಕಳೆಗಳು ಕೀಟ ಮತ್ತು ರೋಗಾಣುಗಳಿಗೆ ಆಶ್ರಯತಾಣವಾಗಿಯೂ ಸಾಕಷ್ಟು ಹಾನಿಯನ್ನುಂಟು ಮಾಡುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಕೃಷಿ ಕ್ಷೇತ್ರದಲ್ಲಿ ಕಳೆ ನಿಯಂತ್ರಣ ತುಂಬಾ ಅವಶ್ಯಕವಾದದ್ದು. ಕಳೆ ನಿಯಂತ್ರಣದಲ್ಲಿ ಮುಖ್ಯವಾಗಿ ಕಳೆಗಳು ಬಾರದಂತೆ ತಡೆಯೊಡ್ಡಬೇಕು ನಂತರದ ಹಂತದಲ್ಲಿ ಅವುಗಳನ್ನು ನಿರ್ಮೂಲ ಮಾಡುವುದು ಅವಶ್ಯವಾಗಿರುತ್ತದೆ

1) ಕಳೆಗಳು ಬಾರದಂತೆ ತಡೆಯೊಡ್ಡುವ ವಿಧಾನಗಳು:

- ಶುದ್ಧ ಬಿತ್ತನೆ ಬೀಜ ಅಥವಾ ಸಾಮಗ್ರಿಗಳನ್ನು ಬಳಸುವುದು:
- ಚೆನ್ನಾಗಿ ಕೊಳೆತು ಹದಗೊಂಡ ಕೊಟ್ಟಿಗೆ ಗೊಬ್ಬರವನ್ನು ಬಳಸುವುದು:
- ಹೂವು ಬಿಡುವ ಮುಂಚೆ ಕಳೆಗಳನ್ನು ಕಿತ್ತು ತೆಗೆಯುವುದು:
- ಜಮೀನಿನಸುತ್ತಂಚು ಮತ್ತು ನೀರುಗಾಲುವೆಗಳನ್ನು ಸ್ವಚ್ಛವಾಗಿಡುವುದು:
- ಸ್ವಚ್ಛವಾದ ಕೃಷಿ ಉಪಕರಣಗಳನ್ನು ಬಳಸುವುದು:
- ಸಸಿ ಮಡಿಗಳಲ್ಲಿನ ಸಸಿಗಳ ಮೂಲಕ ಹರಡುವುದನ್ನು ತಡೆಯುವುದು:

2) ಯಾಂತ್ರಿಕ ವಿಧಾನಗಳು:

ಕಳೆಗಳನ್ನು ಕೈಯಿಂದ ಅಥವಾ ಉಪಕರಣಗಳನ್ನು ಬಳಸಿ ಕಿತ್ತು ತೆಗೆಯುವುದಕ್ಕೆ ಯಾಂತ್ರಿಕ ವಿಧಾನ ಎನ್ನುತ್ತಾರೆ ಇವು ತೀರಾ ಹಳೆಯ ಪದ್ಧತಿಗಳಾಗಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ: ಉಳುಮೆ ಮಾಡುವುದು, ಕೈಯಿಂದ ಕಿತ್ತು ತೆಗೆಯುವುದು,ಕೈಗುದ್ದಲಿಯಿಂದ ಕಳೆಗಳನ್ನು ಕಿತ್ತು ತೆಗೆಯುವುದು, ಅಂತರ ಬೇಸಾಯ/ ಎಡೆ ಹೊಡೆಯುವುದು , ಕೆಸರು ಗದ್ದೆಯಲ್ಲಿರುವಂತೆ ನೀರು ನಿಲ್ಲಿಸುವುದು.

3) ಬೇಸಾಯ ಪದ್ಧತಿಗಳು:

- **ಬೆಳೆ ಪರಿವರ್ತನೆ:–**
- **ಡಾಬ್ ಪದ್ಧತಿ:–** ಬೆಳೆ ಇಡುವ ಮುಂಚೆ ಕಳೆಗಳ ಬೀಜ ಮೊಳೆಯುವಂತೆ ಮಾಡಲು ಎರಡು ಸಾರಿ ನೀರನ್ನು ಹಾಯಿಸಿ ಅವು ಉಲುಸಾಗಿ ಬೆಳೆಯಲು ಪ್ರಾರಂಭಿಸಿದಾಗ ಒಂದೆರಡು ಸಾರಿ ಉಳುಮೆ ಮಾಡುವುದರಿಂದ ಕಳೆಗಳು ನಾಶಹೊಂದವವು,
- **ಹೊದಿಕೆ ಹರಡುವುದು:–** ಬೆಳೆಗಳ ಸಾಲುಗಳಲ್ಲಿ ಯಾವುದೇ ಸಾವಯವ ತ್ಯಾಜ್ಯ ವಸ್ತುವನ್ನು ಹೊದಿಕೆಯಾಗಿ ಹರಡುವುದು..
- **ನೀರಾವರಿ ವಿಧಾನ:–**

ಮಣ್ಣನ್ನು ಸೌರ ಶಕ್ತಿಯಿಂದ ಕಾಯಿಸುವುದು:–

4) ರಸಾಯನಿಕ ಹತೋಟಿ ಕ್ರಮಗಳು:

ಕೃಷಿ ಕಾರ್ಮಿಕರ ಅಥವಾ ಕೂಲಿಯಾಳುಗಳ ಅಭಾವ ದಿನದಿಂದ ದಿನಕ್ಕೆ ಏರುತ್ತಿದ್ದು ಖರ್ಚು ಅಧಿಕವಾಗುತ್ತದೆ. ಆದ್ದರಿಂದ ಕೈಯಿಂದ ಕಿತ್ತು ಅಥವಾ ಯಾಂತ್ರಿಕವಾಗಿ ಕಳೆಗಳನ್ನು ಹತೋಟಿ ಮಾಡಲು ಕಷ್ಟವಾಗುತ್ತದೆ. ಬೆಳೆ ಅವಧಿಯಲ್ಲಿ ಎರಡು ಸಾರಿ ಕಳೆ ಕೀಳಲು, ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ಯಾಂತ್ರಿಕ ವಿಧಾನಕ್ಕೆ ಹೋಲಿಸಿದರೆ ಒಂದು ಎಕರೆಯಷ್ಟು ಜಮೀನಿನಲ್ಲಿ ರಾಸಾಯನಿಕಗಳನ್ನು ಬಳಸಿ ಕಳೆಗಳನ್ನು ಹತೋಟಿ ಮಾಡಲು ತಗಲುವ ವೆಚ್ಚ ಬಹಳಷ್ಟು ಕಡಿಮೆ ಇರುತ್ತದೆ. ಅಲ್ಲದೆ ಕಳೆನಾಶಕಗಳನ್ನು ಬಳಸುವುದರಿಂದ ಕಳೆಗಳನ್ನು ಪ್ರಾರಂಭದಲ್ಲಿಯೇ ಅಥವಾ ಸರಿಯಾದ ಹಂತದಲ್ಲಿ ಪರಿಣಾಮಕಾರಿಯಾಗಿ ಹತೋಟಿ ಮಾಡಲು ಸಾಧ್ಯವಾಗಿ ಅವುಗಳಿಂದ ಬೆಳೆಗಳಿಗುಂಟಾಗುವ ಸ್ಪರ್ಧೆಯನ್ನು ಕಡಿಮೆಗೊಳಿಸಿ ಬೆಳೆಗಳು ಚೆನ್ನಾಗಿ ವೃದ್ಧಿ ಹೊಂದಲು ನಂತರ ಇಳುವರಿಯನ್ನು ಹೆಚ್ಚಿಸಲು ಅನುವು ಮಡಿಕೊಡುತ್ತದೆ.

ಕಳೆನಾಶಕಗಳಲ್ಲಿ ಮುಖ್ಯವಾಗಿ ಎರಡು ವಿಧಗಳುಂಟು ಅವುಗಳೆಂದರೆ: **ಉದಯ ಪೂರ್ವ ಕಳೆ ನಾಶಕಗಳು (ಕಳೆ ಬರುವುದಕ್ಕೆ ಮೊದಲು ಬಳಸುವ ಕಳೆನಾಶಕಗಳು):–** ಈ ಕಳೆನಾಶಕಗಳನ್ನು ಕಳೆಗಳು ಹಾಗೂ ಬೆಳೆಗಳು ಮೊಳಕೆ ಹೊಡೆದು ಮಣ್ಣಿನಿಂದ ಹೊರಬರುವ ಮೊದಲು ಬಳಸಲಾಗುವುದು ಅಥವಾ ಬೆಳೆಗಳು ಬಂದಿದ್ದು ಕಳೆಗಳು ಬರುವ ಪೂರ್ವದಲ್ಲೂ ಬಳಸಬಲ್ಲವಾಗಿರುತ್ತವೆ. ಇಂತಹ ಕಳೆನಾಶಕಗಳನ್ನು ಬೆಳೆಯ ಬಿತ್ತನೆಯಾದ ದಿನ ಅಥವಾ ಮಾರನೆಯ ದಿನ ಮಣ್ಣಿನಲ್ಲಿ ಸಾಕಷ್ಟು ತೇವಾಂಶ ಇರುವಾಗಲೇ ಕಳೆನಾಶಕಗಳನ್ನು ಭೂಮಿಗೆ ಸಿಂಪಡಿಸಬೇಕಾಗುತ್ತದೆ. ಈ ಕಳೆನಾಶಕಗಳು ಮುಂದಿನ ಒಂದು ತಿಂಗಳವರೆಗೆ ಬೆಳೆಯೊಂದಿಗೆ ಬರುವ ಕಳೆಗಳನ್ನು ನಾಶ ಮಾಡುತ್ತವೆ ನಂತರ ಒಂದು ಎಡೆಕುಂಟೆಯನ್ನು ಹಾಯಿಸುವುದರಿಂದ ಬೆಳೆ ಅವಧಿಯಲ್ಲಿನ ಸಾಕಷ್ಟು ಕಳೆಗಳು ನಿಯಂತ್ರಣಗೊಂಡು ಅಧಿಕ ಇಳುವರಿಗೆ ಕಾರಣವಾಗುತ್ತವೆ.

- **ಉದಯೋತ್ತರ ಕಳೆ ನಾಶಕಗಳು (ಕಳೆ ಬಂದ ನಂತರ ಬಳಸುವ ಕಳೆನಾಶಕಗಳು):**

ಈ ಕಳೆಗಳನ್ನು ಬೆಳೆ ಮತ್ತು ಕಳೆಗಳು ಮೊಳಕೆಯೊಡೆದು ಎಲೆ ಬಂದ ನಂತರ ಬಳಸಲಾಗುವುದು. ಇವುಗಳು ಬೆಳೆಗಳಿಗೆ ಹಾನಿ ಉಂಟು ಮಾಡದೆ ಕೇವಲ ಕಳೆಗಳನ್ನಷ್ಟೆ ನಾಶಪಡಿಸುತ್ತವೆ. ಇವುಗಳಲ್ಲಿ ಕೆಲವು ಕಳೆನಾಶಕಗಳು ಅಗಲ ಎಲೆಯ ಕಳೆಗಳನ್ನು ನಾಶಪಡಿಸಿದರೆ ಇನ್ನೂ ಕೆಲವು ಹುಲ್ಲಿನ ಗುಂಪಿಗೆ ಸೇರಿದ ಸಸ್ಯಗಳನ್ನು ಮಾತ್ರ ನಾಶಪಡಿಸುತ್ತವೆ.

5) ಜೈವಿಕ ಕಳೆ ಹತೋಟಿ ಕ್ರಮಗಳು:–

ಈ ಕ್ರಮಗಳಲ್ಲಿ ಸಜೀವ ಕ್ರೀಮಿ ಕೀಟಗಳು, ರೋಗಾಣುಗಳು, ಕಳೆಗಳನ್ನು ತಿನ್ನುವ ಮೀನು ಇತರ ಪ್ರಾಣಿಗಳು ಕಳೆಗಳನ್ನು ಹತ್ತಿಕ್ಕುವ ಸಸ್ಯಗಳನ್ನು ಬಳಸಲಾಗುವುದು. ಈ ವಿಧಾನವು ತೀರಾ ಮಿತಿಯಿಂದ ಕೂಡಿದೆ ಯಾಕೆಂದರೆ ಬೆಳೆ ಹಾಗೂ ಕಳೆಗಳೆರಡೂ ಹೆಚ್ಚು ಕಡಿಮೆ ಒಂದೆ ತೆರನಾದ ಬಾಹ್ಯ ರಚನೆಯಿಂದ ಕೂಡಿರುವುದರಿಂದ ಜೈವಿಕ ಪ್ರತಿನಿಧಿಗಳು ಬೆಳೆಯನ್ನು ಮುತ್ತಿ ಹಾನಿ ಮಾಡಬಹುದು. ಹಾಗೂ ಯಾವುದೇ ಒಂದು ಬೆಳೆಯಲ್ಲಿ ಹಲವಾರು ಪ್ರಬೇದಗಳಿಗೆ ಸೇರಿದ ಕಳೆಗಳಿದ್ದು, ಜೈವಿಕ ಪ್ರತಿನಿಧಿಗಳೆನಿದ್ದರೂ ಒಂದು ಪ್ರಭೇದಕ್ಕೆ ಮಾತ್ರ ನಿರ್ಧಿಷ್ಟವಿರುತ್ತವೆ. ಜೊತೆಗೆ ಈ ಕೀಟಗಳನ್ನು ಸಾಕುವುದು ಕಷ್ಟದ ಕೆಲಸವಾಗಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಲು ದೊಡ್ಡ ಗಾತ್ರದ ಪ್ರಯೋಗ ಶಾಲ ಮತ್ತು ಸಿಬ್ಬಂದಿ ಅಗತ್ಯವಿರುತ್ತದೆ. ಆದ್ದರಿಂದ ಜೈವಿಕ ಹತೋಟಿ ಖರ್ಚಿನಿಂದ ಕೂಡಿದ ವಿಧಾನವಾಗಿದೆ.